ರೀತಿಯ ಒತ್ತಡ ತಂದಿದ್ದಾನೆ. ಗಾಯದ ಮೇಲೆ ಬರೆ ಎಳೆದಂತೆ ಈತನ ಬ್ಯಾಗಿನಲ್ಲಿ ಜಯದೇವ ಆಸ್ಪತ್ರೆಗೆ ಸಂಬಂಧಿಸಿದಂತೆ ಪತ್ರಗಳೂ ಸಿಕ್ಕವೆ! ಯಾಕೋ ಇತ್ತೀಚೆಗೆ ನನ್ನ ಗ್ರಹಚಾರವೇ ಸರಿಯಾಗಿಲ್ಲ. ಸಾಲ ಮಾಡಿ ಸೈಟೊಂದನ್ನು ಕೊಂಡೆನಾದರೂ ಮನೆ ಕಟ್ಟಿಸಲು ಹಣ ಹೊಂದಿಕೆಯಾಗದೆ ಹಾಗೇ ಉಳಿದಿದೆ. ಸಿಗಬೇಕಾಗಿದ್ದ ಪ್ರಮೋಷನ್ ಕೂಡ ಮುಂದೂಡಲ್ಪಟ್ಟಿದೆ. ಈ ಮಧ್ಯೆ ಇದು ಬೇರೆ.

ಅಮ್ಮ ಹಾಗೂ ಜ್ಯೋತಿಗೆ ಫೋನಿನಲ್ಲಿ ಬಂದ ವಿಷಯದ ಬಗ್ಗೆ ತಿಳಿಸಿ ಆಸ್ಪತ್ರೆಗೆ ಹೋದೆ. ಎರಡು ದಿವಸಗಳಿಂದ ನಾಪತ್ತೆಯಾಗಿದ್ದ ಧರಣೇಂದ್ರಯ್ಯನವರು ಇಲ್ಲಿದ್ದಾರೆ! ಅವರು ಚಿಕಿತ್ಸೆ ಪಡೆಯುತ್ತಿರುವ ರೂಮಿನ ಸಂಖ್ಯೆ ಪಡೆದು ಓಡಿದೆ.

ಕೃತಕ ಉಸಿರಾಟ ಅಳವಡಿಕೆಯಲ್ಲಿ ಮಲಗಿದ್ದ ಧರಣೇಂದ್ರಯ್ಯನವರು ನಾನು ಒಳಬಂದ ಸದ್ದಿಗೆ ಮೆಲ್ಲಗೆ ಕಣ್ತೆರೆದು ನನ್ನ ಕಡೆಗೊಮ್ಮೆ ದೃಷ್ಟಿ ಹಾಯಿಸಿ ಕ್ಷೀಣವಾಗಿ ನಕ್ಕರು. ಅವರ ಕೈಯನ್ನು ಮೆಲ್ಲಗೆ ಸವರಿ ಅಲ್ಲಿ ನಿಲ್ಲಲಾರದೆ ಹೊರಬಂದೆ. ಧರಣೇಂದ್ರಯ್ಯನವರ ಮೇಲ್ವಿಚಾರಣೆ ಹೊತ್ತಿದ್ದ ವೈದ್ಯರ ಬಳಿ ವಿಚಾರಿಸಿದಾಗ ಮತ್ತಷ್ಟು ಆಶ್ಚರ್ಯಕರ ಸಂಗತಿ ಹೊರಬಿದ್ದವು. ಸುಮಾರು ಎರಡು ವರ್ಷಗಳ ಹಿಂದೆ ಈ ವ್ಯಕ್ತಿ ಇದೇ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಎರಡು ತಿಂಗಳ ಹಿಂದೆ ಮತ್ತೆ ಇದೇ ತೊಂದರೆ ಕಾಣಿಸಿಕೊಂಡು ಚಿಕಿತ್ಸೆಗೆಂದು ಬೆಂಗಳೂರಿನ ಆಸ್ಪತ್ರೆಗೆ ಬಂದಿದ್ದಾರೆ. ಇದೀಗ ಹೃದಯದ ಕವಾಟದಲ್ಲಿ ತೊಂದರೆ ಉಲ್ಬಣಿಸಿರುವುದರಿಂದ ತುರ್ತಾಗಿ ಅವರನ್ನು ಅಸ್ಪತ್ರೆಗೆ ದಾಖಲು ಮಾಡಿಕೊಂಡಿದ್ದಾರೆ.

"ಶೀಘ್ರವಾಗಿ ಅವರ ಹೃದಯ ಶಸ್ತ್ರಚಿಕಿತ್ಸೆ ಮಾಡಿಸದೆ ಹೋದರೆ ಅವರು ಬದುಕುವ ಅವಕಾಶಗಳು ಕಡಿಮೆ. ಅವರು ತುಂಬಾ ನಿಶ್ಯಕ್ತರಾಗಿದ್ದಾರೆ. ಅವರ ಆರೋಗ್ಯ ಸ್ಥಿತಿ ನೋಡಿದರೆ ಶಸ್ತ್ರ ಚಿಕಿತ್ಸೆ ಮಾಡಿದರೂ ಅವರು ಹೆಚ್ಚು ದಿನ ಬದುಕುತ್ತಾರೆ ಅಂತ ಹೇಳೋಕೆ ಆಗೋಲ್ಲ" ಎಂದ ವೈದ್ಯರ ಮಾತು ಕೇಳಿ ಏನು ಪ್ರತಿಕ್ರಿಯಿಸಬೇಕು ಎಂದು ತಿಳಿಯದೆ ಗೊಂದಲಕ್ಕೊಳಗಾದೆ.

"ಧರಣೇಂದ್ರಯ್ಯನವರು ಅವರ ಕಡೆಯವರು ಅಂತ ನಿಮ್ಮ ಹೆಸರು ಮತ್ತು ವಿಳಾಸವನ್ನು ಮಾತ್ರ ನೀಡಿದ್ದರಿಂದ ನಾವು ನಿಮ್ಮನ್ನು ಕರೆಸಬೇಕಾಯ್ತು" ಎಂದು ಹೇಳಿ ಹೋದರು ವೈದ್ಯರು. ನನ್ನ ತಲೆ ಬಿಸಿಯಾಯ್ತು. ಈ ಮುದುಕ ನನ್ನನ್ನೇ ವಾರಸುದಾರನನ್ನಾಗಿ ಆಯ್ದುಕೊಂಡರೆ? ಇವರೇನಾದರೂ ತೀರಿಕೊಂಡರೆ? ಮುಂದೆ ಯೋಚಿಸಲು ಮನಸ್ಸು ಇಚ್ಛಿಸಲಿಲ್ಲ.

ತಲೆ ಗೊಂದಲದ ಗೂಡಾಗಿತ್ತು. ನನ್ನನ್ನು ಭೇಟಿಮಾಡಲು ಅಪರಿಚಿತ ವ್ಯಕ್ತಿಯೊಬ್ಬರು ಕಾಯುತ್ತಿರುವುದಾಗಿ ಸ್ವಾಗತಕಾರಿಣಿ ತಿಳಿಸಿದಳು. ಆ ವ್ಯಕ್ತಿ ತನ್ನನ್ನು ವಕೀಲ ಹರೀಶ್ ಸಗಾಯ್, ಧರಣೇಂದ್ರಯ್ಯನವರ ಲೀಗಲ್ ಅಡ್ವೈಸರ್ ಎಂದು ಪರಿಚಯಿಸಿಕೊಂಡ. ಧರಣೇಂದ್ರಯ್ಯನವರ ಹೃದಯದ ಬಲ ತುಂಬಾ ಕ್ಷೀಣಿಸುತ್ತಿದ್ದು ಈ ಬಾರಿ ಚಿಕಿತ್ಸೆಯ ನಂತರವೂ ಬದುಕುಳಿಯುವ ಅವಕಾಶ ಬಹಳ ಕಡಿಮೆ ಎಂದು ವೈದ್ಯರು ತಿಳಿಸಿದ್ದರಂತೆ. ಇದರಿಂದ ಧರಣೇಂದ್ರಯ್ಯ ಮುಂಬೈನ ತಮ್ಮೆಲ್ಲಾ ಆಸ್ತಿಯನ್ನು ಮಾರಿ, ಇಡೀ ಕರ್ನಾಟಕ ಸುತ್ತಾಡಿ ಭಾಗಶಃ ಸಂಬಂಧಿಕರನ್ನೆಲ್ಲಾ ಭೇಟಿಮಾಡಿ ಬಂದಿದ್ದಾರೆ. ಹಾಗೇ ನಮ್ಮ ಮನೆಗೆ ಬಂದಿದ್ದಾಗಲೇ ಅವರ ಸ್ಥಿತಿ ಉಲ್ಬಣಿಸಿದೆ. ಇದಿಷ್ಟೂ ಆ ವಕೀಲರು ಹೇಳಿದ ವಿಷಯ.

"ಧರಣೇಂದ್ರಯ್ಯನವರು ವಿಲ್ ಬರೆಸಲು ನನ್ನನ್ನು ಕರೆಸಿದ್ದಾರೆ" ಎನ್ನುತ್ತಾ, "ನಿಮ್ಮ ಬಗ್ಗೆ ಧರಣೇಂದ್ರಯ್ಯನವರು ಹೇಳಿದ್ದಾರೆ" ಎಂದು ಮಾತು ಮುಗಿಸಿದರು ವಕೀಲರು.